**<u>ಸಾಕ್ಷಿಗೆ ದಿನಾಂಕ 27-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ಅರ್ಜಿದಾರರ ಪರ ಶ್ರೀಮತಿ ಎ ಎನ್ ವಿ ವಕೀಲರಿಂದಃ</u>**

1. ಪೊಲೀಸ್ ದಾಖಲೆಗಳು, ವೈದ್ಯಕೀಯ ದಾಖಲೆಗಳು, ಆಂತರಿಕ ತನಿಖಾ ವರದಿ ಮತ್ತು ಲಾರಿ ಸಂಖ್ಯೆ ಕೆಎ-52-4208 ರ ದಾಖಲೆಗಳ ಆಧಾರದ ಮೇಲೆ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿರುತ್ತೇನೆ. ಪೊಲೀಸ್ ದಾಖಲಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ದಿಃ08.04.2023 ರಂದು ಅಪಘಾತವಾಗಿದ್ದು, ಪೊಲೀಸರೇ ಆಸ್ಪತ್ರೆಗೆ ಹೋಗಿ ಗಾಯಾಳು ಬಳಿ ಹೇಳಿಕೆ ಪಡೆದುಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಂ ಎಲ್ ಸಿ ಮತ್ತು ಗಾಯದ ಪ್ರಮಾಣಪತ್ರದಲ್ಲಿ ಅರ್ಜಿದಾರರ ತಪ್ಪಿನಿಂದ ಅಪಘಾತವಾಗಿದೆ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ.  ನಿಆರ್.9 ರಲ್ಲಿ ಲಾರಿಯ ಮಾಲೀಕ ಅಪಘಾತವನ್ನು ಒಪ್ಪಿಕೊಂಡು ಮತ್ತು ಚಾಲಕನ ಡಿಎಲ್ ನ್ನು ಹಾಜರುಪಡಿಸಿರುತ್ತಾನೆ ಎಂದರೆ ಸರಿಯಲ್ಲ. 4 ನೇ ಎದುರುದಾರರಿಗೆ ಲಾರಿಯ ದಾಖಲೆ ಮತ್ತು ಚಾಲಕನ ಡಿಎಲ್ ನ್ನು ಕೋರಿ ನೋಟೀಸ್ ನೀಡಿರುತ್ತೇವೆ. ಆದರೆ ಸದರಿ ನೋಟೀಸಿನ ಪ್ರತಿಯನ್ನು ಹಾಜರಪಡಿಸಿರುವುದಿಲ್ಲ ಎಂದರೆ ಸರಿ.

2. ಎರಡನೇ ಆರೋಪಿ ಅಪರಾಧಿಕ ನ್ಯಾಯಾಲಯದಲ್ಲಿ ತಪ್ಪೊಪ್ಪಿಕೊಂಡು ದಂಡ ಪಾವತಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತದ ಸಮಯದಲ್ಲಿ ಪಾಲಿಸಿ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ನಾವು ಪಾಲಿಸಿ ನೀಡಿರುವ ಲಾರಿಯ ಖಾಲಿ ತೂಕ 4020 ಕೆ ಜಿ ಇರುತ್ತದೆ. ಲಾರಿಗೆ ಪರ್ಮಿಟ್ ದಿಃ 25.11.2022 ರಿಂದ 24.11.2027 ರವರೆಗೆ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ. ಲಾರಿ ಚಾಲಕನಿಗೆ ದಿಃ11.11.2029 ರವರೆಗೆ ನಾನ್ ಟ್ರಾನ್ಸ್ ಪೋರ್ಟ್ ಡಿಎಲ್ ಇದೆ ಎಂದರೆ ಸರಿ. ದ್ವಿಚಕ್ರ ವಾಹನ ಪಾದಚಾರಿಗೆ ಡಿಕ್ಕಿಪಡಿಸಿದಾಗ ಲಾರಿ ಪಾದಚಾರಿಯ ಮೇಲೆ ಹರಿದುಹೋಗಿದೆ ಎಂದರೆ

ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ನೀಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ ಕೆ ಎಸ್ ವಕೀಲರಿಂದಃ**

1. ಅರ್ಜಿದಾರರು ರಸ್ತೆಯ ಮಧ್ಯದಲ್ಲಿದ್ದ ಸಿಮೆಂಟ್ ನ ರಸ್ತೆ ವಿಭಜಕವನ್ನು ದಾಟಿ ಇಳಿಯುವಾಗ ಅಪಘಾತವಾಗಿದೆ ಎಂದರೆ ಸರಿ. ಎಲ್ಲ ಪೊಲೀಸ್ ದಾಖಲೆಗಳಲ್ಲಿ ನಮ್ಮ ವಿಮೆ ಹೊಂದಿದ ಲಾರಿಯು ಅಪಘಾತದಲ್ಲಿ ಭಾಗಿಯಾಗಿದೆ ಎಂದು ನಮೂದಿಸಿರುತ್ತಾರೆ ಎಂದರೆ ತಪ್ಪಾಗಿ ನಮೂದಿಸಿರುತ್ತಾರೆ. ಲಾರಿಯ ಮಾಲೀಕನಾಗಲೀ ಅಥವಾ ಚಾಲಕನಾಗಲೀ ಈ ಅಪಘಾತದಲ್ಲಿ ನಮ್ಮದು ತಪ್ಪಿಲ್ಲ ಎಂದು ಹೇಳಿಕೆ ನೀಡಿಲ್ಲ ಎಂದರೆ ಸರಿ. ಒಂದನೇ ಆರೋಪಿಯ ಅಪರಾಧಿಕ ಪ್ರಕರಣದಲ್ಲಿ ಬಿಡುಗಡೆಯಾಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಪರಿಹಾರ ನೀಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ದ್ವಿಚಕ್ರ ವಾಹನದ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನ ಈ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರುಹಾಜರು. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ 4 ನೇ ಮತ್ತು 5 ನೇ ಎದುರುದಾರರು ಏಕ-ಪಕ್ಷೀಯ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು-ವಿಚಾರಣೆಃಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**